# ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಆಳಂದ.

## ಸಿ.ಸಿ. ನಂ. 65/2024

**ಆರೋಪಿ ಹೆಸರುಃ**

ಶಫೀ ತಂದೆ ಜಾಫರಸಾಬ ಭಾಗವಾನ,
ವಯಸ್ಸುಃ 41 ವರ್ಷ, ಉಃ ಟೇಲರ್ ಕೆಲಸ,
ಸಾಃ ಅಂಬಲಗಾ, ತಾಃಕಮಲಾಪುರ, ಜಿಃ ಕಲಬುರಗಿ.

**ಃ ಆ ಪಾ ದ ನೆಃ**

ದಿನಾಂಕ *09.08.2023* ರಂದು *5.30* ಗಂಟೆ ಸುಮಾರಿಗೆ ನರೋಣಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಬಲಗಾ-ಮಹಾಗಾಂವ ಕ್ರಾಸ ಮುಖ್ಯ ರಸ್ತೆಯ ಅಂಬಲಗಾ ಗ್ರಾಮದ ಬುದ್ದ ವಿಹಾರ ಎದುರುಗಡೆ ರೋಡಿನ ಮೇಲೆ ಆರೋಪಿತನಾದ ನೀವು ನಿಮ್ಮ ವಾಹನ ಬಜಾಜ ಕಂಪನಿಯ ಅವೇಂಜರ ಮೋಟಾರ ಸೈಕಲ್ ನಂ.ಟಿ.ಎಸ್.*07*.ಇ.ಯೂ. *8017* ನೇದ್ದಕ್ಕೆ ವಿಮೆ ಮಾಡಿಸದೆ ನಿಮ್ಮ ಹೆಂಡತಿಯಾದ ಸಾಕ್ಷಿ ನಂ.*1* ನೇದ್ದವರಿಗೆ ಕೂಡಿಸಿಕೊಂಡು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಮಹಾಗಾಂವ ಕ್ರಾಸ ಮಾರ್ಗವಾಗಿ ಕಲಬುರಗಿ ಕಡೆಗೆ ಹೋಗುತ್ತಿದ್ದಾಗ ನಾಯಿ ಅಡ್ಡ ಬಂದಿರುವದರಿಂದ ಆರೋಪಿತನಾದ ನೀವು ಒಮ್ಮಲೇ ಮೋಟಾರ್ ಸೈಕಲನ ಬ್ರೇಕ್ ಹಾಕಿದಾಗ ಮೋಟರ್ ಸೈಕಲ್ ಸಮೇತ ಕಳಗೆ ಬಿದ್ದಿರುವದರಿಂದ ಸಾಕ್ಷಿ ನಂ.*1* ರವರಿಗೆ ತಲೆಯ ಬಲಭಾಗಕ್ಕೆ ಭಾರಿ ರಕ್ತಗಾಯ, ಮೂಗಿಗೆ ತರಚಿದ ಗಾಯವಾಗಿ ಕಲಬುರಗಿಯ ಜೇಮ್ಸ್ ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿರುವಾಗ ದಿಃ *24.08.2023* ರಂದು *8.40* ಗಂಟೆ ಸುಮಾರಿಗೆ ತರುನಮ ಅವರು ಮೃತಪಟ್ಟಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ *279, 304(A)* ಐ.ಪಿ.ಸಿ. ಮತ್ತು ಕಲಂ *196* ಎಮ್.ವಿ.ಆಕ್ಟ. ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಅಂತ ನಿಮ್ಮ ಮೇಲೆ ಅಪಾದನೆ ಇರುತ್ತದೆ. ಏನು ಹೇಳುವಿರಿ?

ಪ್ರಶ್ನೆ ಃ ಈ ಮೇಲೆ ಒದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ಅ:

ಪ್ರಶ್ನೆ ಃ ಸದರ ಆಪಾದನೆಗೆ ನೀನು ಒಪ್ಪುತ್ತಿಯಾ ಅಥವಾ ವಿಚಾರಣೆಯಾಗಬೇಕೋ?

ಉತ್ತರ: ಅ:

(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಒದಿ ಹೇಳಿವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ.ಎಫ್.ಸಿ**
**ನ್ಯಾಯಾಲಯ, ಆಳಂದ.**